ಆಕೆ ಹೇಳಬೇಕೆಂದುಕೊಂಡದ್ದನ್ನು ಇನ್ನೂ ಹೇಳಿ ಮುಗಿಸಲಿಲ್ಲವಾ?

'ಕಾಲ ಬದಲಾಗಿದೇರಿ. ಒಂದೆರಡು ಅಂತ ಲೆಕ್ಕ ಇಡಕ್ಕಾಗಲ್ಲ. ಎಲ್ಲ ಬದಲಾಗಿದೆ. ಮನುಷ್ಯರೂ ಬದಲಾಗಿದ್ದಾರೆ. ವೃತ್ತಿಗಳೂ ಬದಲಾಗಿದ್ದಾವೆ. ನೋ ನೋಬೆಲ್ ಪ್ರೊಫೆಷನ್ಸ್. ಹಿಂದಿನ ಕಾಲದಲ್ಲಿ ಜನ ತಮ್ಮ ತಮ್ಮ ವೃತ್ತಿಗಳಲ್ಲಿ ಎಷ್ಟೋ ಸಂತೃಪ್ತಿಯನ್ನು ಅನುಭವಿಸುತ್ತಿದ್ದರು. ಅಸಂತೃಪ್ತಿ ಏನಾದರೂ ಇದ್ದರೆ, ಉಂಟಾದರೆ ಆಟಪಾಠಗಳಿಂದ, ಕಲೆಗಳಿಂದ ಸಹಜಸಿದ್ಧವಾದ ಸೃಜನಶೀಲತೆಯಿಂದ ಆತ್ಮೀಯವಾದ ಸಂಬಂಧಗಳಿಂದ ಅವುಗಳನ್ನು ನಿವಾರಿಸಿಕೊಂಡು ಹಾಯಾಗಿ ಬದುಕುತ್ತಿದ್ದರು. ಆದರೆ ಇವತ್ತು?

ಜೀವ ನಿಟ್ಟುಸಿರಾಗುತ್ತೇರಿ ಈ ಸೊಸೈಟೀನ ನೋಡಿ. ಈ ಸ್ಪೀಡು ಒಳ್ಳೆಯದಲ್ಲ. ನನಗೆ ಏನಾಗ್ತಿದೆ ಅನ್ನೋದನ್ನು ನನ್ನ ಕಣ್ಣುಗಳನ್ನು ಕಳೆದುಕೊಳ್ಳುವವರೆಗೆ ನಾನು ತಿಳಿದುಕೊಳ್ಳಲಾಗದಂತೆಯೇ ಈ ಸೊಸೈಟಿ ಕೂಡ ತನಗೇನು ಹಾನಿಯಾಗ್ತಾ ಇದೆ ಅಂತ ತಿಳಿದುಕೊಳ್ತಾ ಇಲ್ಲ. ಈಗ ಯಾರಿಗೂ ಬೆಲೆ ಇಲ್ಲ. ಗೌರವ ಇಲ್ಲ. ಮರ್ಯಾದೆಯಿಂದ ಕೂಡಿದ ಐಡೆಂಟಿಟಿ ಇಲ್ಲ. ಹಣಕ್ಕಾಗಿ ಎಲ್ಲದರಲ್ಲೂ ಎಲ್ಲರೂ ಕರಪ್ಟ್ ಆಗಿಬಿಟ್ಟಿದ್ದಾರೆ. ಆ ವಿಷಯ ಸೊಸೈಟಿಗೂ ಗೊತ್ತು. ಅದಕ್ಕೇ ಅದು ತನ್ನನ್ನು ತಾನು ಗೌರವಿಸಿಕೊಳ್ತಿಲ್ಲ.

ಹಣ... ಹಣ... ಹಣಕ್ಕೊಂದೇ ಬೆಲೆ. ಆದರೆ ವಿಪರ್ಯಾಸ ಗಮನಿಸಿದೀರಾ? ಒಂದು ಲೆವೆಲ್‌ನ ಹಣವಿದ್ದವರಿಗೆ ಇನ್ನೊಂದು ಲೆವೆಲ್‌ನ ಹಣವಂತರ ಬಗ್ಗೆ ಗೌರವವಿಲ್ಲ. ಅಷ್ಟೇಕೆ. ದುಬಾರಿ ಬೆಲೆಯ ಮೊಬೈಲ್ ಫೋನ್ ಇಟ್ಟುಕೊಂಡವನಿಗೆ ಕಡಿಮೆ ಬೆಲೆಯ ಮೊಬೈಲ್ ಫೋನ್ ಇಟ್ಟುಕೊಂಡವನ ಬಗ್ಗೆ ಗೌರವವಿಲ್ಲ. ಕಡಿಮೆ ಬೆಲೆಯ ಮೊಬೈಲ್ ಇಟ್ಟುಕೊಂಡವನಿಗೆ ಮೊಬೈಲೇ ಇಲ್ಲದವನ ಬಗ್ಗೆ ಗೌರವವಿಲ್ಲ. ಯಾವ ಸ್ಥಿತಿಯೊಳಗೂ ಇವತ್ತು ಮನುಷ್ಯನಿಗೆ ತೃಪ್ತಿಯಿಲ್ಲ. ಅವನಿಗೆ ತೃಪ್ತಿ ನೀಡುವ ವೃತ್ತಿ ಎಂಬುದೇ ಇಲ್ಲ. ಅಸಂತೃಪ್ತಿ ಉಂಟಾದರೆ ತೊಲಗಿಸಿಕೊಳ್ಳಲು ಕಲೆ ಇಲ್ಲ. ತುಸು ದಣಿವಾರಿಸಿಕೊಳ್ಳಲು ಮಾನವ ಸಂಬಂಧಗಳಿಲ್ಲ.

ನಿನ್ನೆ ಮೊನ್ನೆವರೆಗೆ ನಾನು ತುಂಬಾ ದುಃಖ ಪಡ್ತಿದ್ದೆ. ನನ್ನ ಗಂಡನ ಮನೆಯವರು ನಮ್ಮನ್ನು ಬಾಯ್ಕಾಟ್ ಮಾಡಿದ್ದರಿಂದ ರಿಲೇಷನ್ಸ್ ಅನ್ನೋವೇ ಇಲ್ಲದ ಹಾಗಾದವು ಅಂದ್ಕೊಳ್ತಿದ್ದೆ. ಅದೆಲ್ಲ ಟ್ರ್ಯಾಷ್. ಇವತ್ತು ಯಾರ ಹತ್ತಿರವೂ ಯಾರಿಗಾಗಿಯೂ ಸಮಯವಿಲ್ಲ. ಹಾಸಿಗೆ ಹಿಡಿದಿದ್ದಾಗ ನಮ್ಮಕ್ಕನೇ ನನ್ನ ನೋಡಲು ಅವಕಾಶ ಹೊಂದಿಸಿಕೊಂಡು ಬರಬೇಕಾಯಿತು. ಎಲ್ಲರ ಪರಿಸ್ಥಿತಿ ಇದೇ. ಅದಕ್ಕಾಗೇ ಈ ಫ್ರಸ್ಟ್ರೇಷನ್ಸ್. ಈ ಕಾಯಿಲೆಗಳು ಈ ಹೃದಯರೋಗಗಳು ಡಾಕ್ಟರ ಸುತ್ತ ತಿರುಗಾಟಗಳು.

ಈಗಲೇ ಈ ಲೋಕ ಹೀಗಿದೆ, ಇನ್ನು ನಮ್ಮ ಹುಡುಗ ಬೆಳೆದು ದೊಡ್ಡವನಾಗೋ ಹೊತ್ತಿಗೆ ಪರಿಸ್ಥಿತಿ ಹೇಗೋ ಏನೋ ಅಂತ ನನ್ನ ಭಯ.

ಈಗಲೇ ಅವನು ಒಂಟಿ. ಮಾತೃಭಾಷೆ ಬರಲ್ಲ. ಆದ್ದರಿಂದ ಅವನು ಈ ನೆಲದಲ್ಲಿ ಪರ್ಮನೆಂಟಾಗಿ ಮೈನಾರಿಟಿ. ಅವನಿಗಾಗಿ ನಾವೊಬ್ಬ ತಂಗಿಯನ್ನೋ ತಮ್ಮನನ್ನೋ ಕೊಡಲಿಲ್ಲ. ಆದ್ದರಿಂದ ಅವನ ಎಮೋಷನ್ಸ್ ಅನ್ನು ಕನಿಷ್ಠ ಶೇರ್ ಮಾಡಿಕೊಳ್ಳುವವರು ಆಸರೆಯಾಗಿ ನಿಲ್ಲುವವರು ಯಾರೂ ಇಲ್ಲ. ಸ್ಟ್ರಾಂಗ್ ಫ್ರೆಂಡ್‌ಶಿಪ್ ಅನ್ನು ಅಲೋ ಮಾಡುವ ಓದನ್ನು ಅವನು ಓದುತ್ತಲೂ ಇಲ್ಲ. ಅಸಲಿಗೆ ಅಂಥ ಪರಿಸ್ಥಿತಿ ಇವತ್ತಿನ ಸ್ಕೂಲುಗಳಲ್ಲೂ ಇಲ್ಲ. ಇನ್ನು ನೀವೂ ನಾನೂ ನೋಡಿದ ಸಾದಾಸೀದಾ ಜೀವನವನ್ನು ಅವನು ನೋಡಲಿಲ್ಲ. ಅಷ್ಟೇಕೆ ಕನಸಲ್ಲಿಯೂ ಊಹಿಸಲಾರ. ಆದ್ದರಿಂದ ಈ ದೇಶದ ಗ್ರೌಂಡ್ ರಿಯಾಲಿಟಿ ಅವನಿಗೆಂದೂ ಅರ್ಥವಾಗುವುದಿಲ್ಲ.